# ತೊಟ್ಟಿ ಮುಕ್ತ ಪುರಸಭೆಯಾಗಿ ಕಾರ್ಕಳ

ಉಡುಪಿ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಕಾರ್ಕಳವು ಒಟ್ಟು 2011 ರ ಜನಗಣತಿಯಂತೆ ಒಟ್ಟು 25118 ಜನಸಂಖ್ಯೆಯನ್ನು ಹೊಂದಿದೆ. ಈ ಪುರಸಭೆಯ ವ್ಯಾಪ್ತಿಯಲ್ಲಿ ದಿನಂಪ್ರತಿ ಸರಿಸುಮಾರು 5 ರಿಂದ 6 ಟನ್ ಕಸ ಉತ್ಪತ್ತಿಯಾಗುತ್ತಿದೆ.

ಕಸ ನಿರ್ವಹಣೆಯ ಪ್ರಾರಂಭಿಕ ಪ್ರಯತ್ನವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮತ್ತು ಪ್ರತಿಯೊಂದು ರಸ್ತೆಗಳಲ್ಲಿ ತೆರೆದ ಸಾರ್ವಜನಿಕ ಕಸ ಸಂಗ್ರಹಣಾ ತೊಟ್ಟಿಗಳನ್ನು ಇಡಲಾಗಿತ್ತು. ಆದರೆ ಇದರಲಿದ್ದ ಕಸವು ಹೊರ ಚೆಲ್ಲಿ ಬಿಡಾಡಿ ದನಗಳು, ನಾಯಿಗಳು ಎಳೆದಾಡುತ್ತಿದ್ದವು. ಓಡಾಡುವ ಹಾಗೂ ವಾಸಿಸುವ ಜನರಿಗೆ ಅಸನೀಯ ವಾತಾವಾರಣ ನಿರ್ಮಾಣವಾಗಿತ್ತು.

2010ರಲ್ಲಿ ಪುರಸಭೆಯು ಮನೆ ಮನೆಗಳಿಂದ ಕಸ ಸಂಗ್ರಹಿಸುವ ನಿರ್ಧಾರ ಕೈಗೊಂಡು, ಇದರ ಮೊದಲ ಪ್ರಯತ್ನವಾಗಿ ಪ್ರಕ್ರಿಯೆಗೆ ತೊಡಕಾಗುವ ಕಸದ ತೊಟ್ಟಿಗಳನ್ನು ತೆಗೆಯುವ ಯೋಜನೆ ರೂಪಿಸಲಾಯಿತು. ಮೊದ ಮೊದಲಿಗೆ ತುಂಡಾದ ಹಾಳಾದ ಕಸದತೊಟ್ಟಿಗಳನ್ನು ತೆಗೆಯಲು ಪ್ರಾರಂಭಿಸಿದವು. ಸಾರ್ವಜನಿಕರಿಂದ ಹಾಗೂ ಜನಪ್ರತಿನಿಧಿಗಳಿಂದ ಈ ಬಗ್ಗೆ ಆಕ್ಷೇಪಗಳು ಬಂದಾಗ ಸಮಾಧಾನದಿಂದ ಕಾರಣಗಳನ್ನು ನೀಡಿ ತಿಳಿ ಹೇಳಲಾಯಿತು, ಇದರಿಂದ ಜನಪ್ರತಿನಿಧಿಗಳ ಮತ್ತು ಸಾರ್ವಜನಿಕರ ಸಕಾರತ್ಮಕ ಪ್ರತಿಕ್ರಿಯೆ ಸಿಕ್ಕಿತು. ಇದನ್ನು ಅಸ್ತ್ರವನ್ನಾಗಿಸಿಕೊಂಡು, ಉತ್ತಮ ಬಾಂಧವ್ಯವಿರುವ ಜನಪ್ರತಿನಿಧಿಗಳನ್ನು ಸಂಪರ್ಕಿಸಿ ಚರ್ಚಿಸಿ ಈ ಬಗ್ಗೆ ಹೇಳಿ ಸದರಿ ತೊಟ್ಟಿಗಳನ್ನು ತೆಗೆಯಲು ಅವರಿಂದಲೇ ಲಿಖಿತ ದೂರು ಪಡೆದು ಕೊಂಡು ಅದರಂತೆ ಕೆಲಸ ನಿರ್ವಹಿಸ ತೊಡಗಿದೆವು. 3 ತಿಂಗಳ ಅವಧಿ ಒಳಗೆ ಸುಮಾರು 30-35 ರಷ್ಟಿದ ಕಸದ ತೊಟ್ಟಿಗಳನ್ನು ತೆಗೆದು ಎಲ್ಲಾ ಕಡೆಗಳಿಗೆ ಪುರಸಭಾ ಪೌರಕಾರ್ಮಿಕರನ್ನು ಬಳಸಿ ಟ್ರ್ಯಾಕ್ಟರ್ ಟ್ರೇಲರ್ ಮೂಲಕ ತ್ಯಾಜ್ಯದ ಪ್ರಾಥಮಿಕ ಸಂಗ್ರಹಣೆ ಕಾರ್ಯ ಕೈಗೊಂಡಿತು. ಈ ಬಗ್ಗೆ ಶುಲ್ಕವನ್ನು ಸಹಾ ಪುರಸಭೆ ವತಿಯಿಂದಲೇ ಸಂಗ್ರಹಿಸಲು ಪ್ರಾರಂಬಿಸಿತು. ಇದಾದ ನಂತರ ಟ್ರ್ಯಾಕ್ಟರ್‌ಗಳನ್ನು ನೇರವಾಗಿ ಲ್ಯಾಂಡ್ ಪೀಲ್ ಸೈಟಿಗೆ ಕಳುಹಿಸುತ್ತಿದ್ದಾರೆ. ಹೀಗೆ ಮಾಡುವುದರಿಂದ ಪ್ರಾಥಮಿಕವಾಗಿ ಸಂಗ್ರಹಿಸಿದ ಕಸವನ್ನು ನೇರವಾಗಿ ಲ್ಯಾಂಡ್ ಪೀಲ್ ಸೈಟಿಗೆ ವರ್ಗಾಯಿಸಲಾಗುತ್ತಿದೆ. ಯಾವುದೇ ಮಾಧ್ಯಮಿಕ ಕಸ ಸಂಗ್ರಹಣಾ ತೊಟ್ಟಿಗಳನ್ನು ಹಾಗೂ ಮಾಧ್ಯಮಿಕ ಕಸ ಸಾಗಾಣಿಕೆಯ ಅಗತ್ಯತೆ ಇರುವುದಿಲ್ಲ.

ಲ್ಯಾಂಡ್ ಪೀಲ್ ಸೈಟಿನಲ್ಲಿ ಒಂದು ಚಿಂದಿ ಆಯುವ ಕುಟುಂಬಕ್ಕೆ ವಾಸಿಸಲು ಅವಕಾಶ ನೀಡಿ ಅವರಿಂದಲೇ ಅಲ್ಲಿನ ತ್ಯಾಜ್ಯದಲ್ಲಿ ವರ್ಗೀಕರಿಸಿ ವಿಲೇಮಾಡಲಾಗುತ್ತಿದೆ. ಇಲ್ಲಿಯವರೆವಿಗು ಸುಮಾರು 8-10 ಬಗ್ಗೆ ಮರುಬಳಕೆ ತ್ಯಾಜ್ಯವನ್ನು ಪ್ರತ್ಯೇಕಿಸಲಾಗುತ್ತಿದೆ. ಚಿಂದಿ ಆಯುವ ಅಲೆಮಾರಿ ಜನರಿಗೆ ಒಂದು ನೆಲೆ ಒದಗಿಸುವುದರೊಂದಿಗೆ ಕಸದ ಸಮರ್ಪಕ ನಿರ್ವಹಣೆಯಾಗುತ್ತಿದೆ. ಚಿಂದಿ ಆಯುವ ಕುಟುಂಬದ ಮನವೊಲಿಸಿ ಅವರನ್ನು ಈ ಕಾರ್ಯಕ್ಕೆ ಸಿದ್ದಪಡಿಸಲು ಇಲ್ಲಿನ ಪರಿಸರ ಅಭಿಯಂತರರು ಸುಮಾರು 4 ತಿಂಗಳು ಶ್ರಮ ವಹಿಸಿದ್ದಾರೆ.

ಚಿಂದಿ ಆಯುವ ಕುಟುಂಬವು ಪಟ್ಟಣದಲ್ಲಿ ಉತ್ಪತ್ತಿಯಾಗುವ ಕಸದ ಸುಮಾರು 30 ರಿಂದ 40 ರಷ್ಟು ಕಸವನ್ನು ಪುನರ್ಬಳಕೆಯ ವಸ್ತುಗಳನ್ನು ಬೇರ್ಪಡಿಸುತ್ತಿದೆ. ಹೀಗಾಗಿ ಪುರಸಭೆಯ ಲ್ಯಾಂಡ್ ಪೀಲ್ ಸೈಟಿನ ಜೀವಿತಾವಧಿಯು ವೃದ್ಧಿಸಿದಂತಾಗಿದೆ.

ಕಾರ್ಕಳ ಪುರಸಭೆಯು ರಾಜ್ಯ ಸರ್ಕಾರದ ನಗರಾಭಿವೃದ್ದಿ ಇಲಾಖೆಯು ನೀಡಿದ ಉತ್ತಮ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿಯಲ್ಲಿ ಮೂರನೇ ಅತ್ಯುತ್ತಮ ಪುರಸಭೆಯೆಂಬ ಗೌರವಕ್ಕೆ ಪಾತ್ರವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮುಖ್ಯಾಧಿಕಾರಿಗಳಾದ ಶ್ರೀ. ಗೋಪಾಲ ಕೃಷ್ಣರವರನ್ನು (9845150379)

ಅಥವ ಪರಿಸರ ಅಭಿಯಂತರರಾದ ಶ್ರೀ. ಮದನ್ ಕೆ (9480010111) ಇವರನ್ನಾದರು ಸಂಪರ್ಕಿಸಬಹುದಾಗಿದೆ.